

# ಹೊಳೆಯುವ ಹವಳ

ಯಾವುದೇ ಸಮಾರಂಭವಿರಲಿ; ಯಾವ ವಿಧದ್ದೇ ಉಡುಗೆ ತೊಟ್ಟಿರಲಿ, ಹವಳದ ಆಭರಣ ಧರಿಸಿದರೆ ಗುಂಪಿನಲ್ಲಿ ಎದ್ದುಕಾಣುವುದಂತೂ ಖಚಿತ.

■ ರೂಪಾ ಕೆ.ಎಂ.

ಸಾಂಪ್ರದಾಯಿಕ ಉಡುಗೆ ಇರಲಿ ಅಥವಾ ಪಾಶ್ಚಿಮಾತ್ಯ ಶೈಲಿಯ ಉಡುಗೆಗಳೇ ಇರಲಿ; ಹವಳಗಳು ಒಂದು ಆಕರ್ಷಕ ಲುಕ್ ನೀಡುವುದರಲ್ಲಿ ಎಂದಿಗೂ ಹಿಂದೆ ಬಿದ್ದಿಲ್ಲ. ಬಗೆ ಬಗೆಯ ಹವಳದ ನೆಕ್ಲೇಸ್‌ಗಳು ಅಥವಾ ಒಂದೇ ಹವಳವನ್ನು ಬಳಸಿ ಮಾಡಿದ ಮಿನಿಮಲಿಸ್ಟ್ ಆಭರಣಗಳು, ಸಲ್ವಾರ್ ಸೂಟ್‌ಗಳಿಗೆ ಹೆಚ್ಚು ಹೊಂದುವ ಹವಳದ ಸರಗಳು ಹೀಗೆ ಹೆಣ್ಣುಮಕ್ಕಳ ಮುಂದೆ ಹವಳವೊಂದು ಹಲವು ಆಯ್ಕೆಗಳನ್ನು ತೆರೆದಿಡುತ್ತದೆ. ಹವಳ ಹಾಗೂ ಚಿನ್ನ ಬಳಸಿ ಮಾಡಿದ ಕೊರಳಿನ ಹಾರಗಳು ಸೀರೆ ಉಟ್ಟಾಗ ತೊಟ್ಟರೆ ಹೆಚ್ಚು ಚಂದವಾಗಿ ಕಾಣಬಹುದು.

ಕರಾವಳಿ ಭಾಗದ ಕೆಲವು ಸಮುದಾಯಗಳಲ್ಲಿ ಮದುವೆಯಾದ ಹೆಣ್ಣುಮಕ್ಕಳು ಕರಿಮಣಿಯ ಸರದ ಜತೆಗೆ ಹವಳದ ಸರವನ್ನು ತೊಡುವುದು ಕಡ್ಡಾಯ. ವರನ ಮನೆಯವರು ಕರಿಮಣಿ ಸರದ ಜತೆಗೆ ದೊಡ್ಡ ದೊಡ್ಡ ಹವಳವಿರುವ ಚಿನ್ನದ ಸರವನ್ನು ವಧುವಿಗೆ ನೀಡುತ್ತಾರೆ.

ಶುಭ್ರ ಶ್ವೇತವರ್ಣದ ಸೀರೆ ಉಟ್ಟಾಗ ಗಾಢ ಕೆಂಪು ಅಥವಾ ರಕ್ತಗೆಂಪಿನ ಹವಳದ ಚೋಕರ್ ಆಗಲಿ, ನೆಕ್ಲೇಸ್ ಆಗಲಿ ತೊಟ್ಟು ಮುದ್ದಾಗಿ ಕಾಣಬಹುದು. ಕೆಂಪು ಹವಳದ ಪೆಂಡೆಂಟ್‌ಗಳು ಮತ್ತು ನೆಕ್ಲೇಸ್‌ಗಳು ಸರಳವಾಗಿದ್ದರೂ ಕ್ಲಾಸಿಕ್ ಆಗಿ ಕಾಣುತ್ತದೆ. ಸಂಕೀರ್ಣ, ಸಮಕಾಲೀನ ಅಥವಾ ಸರಳ ಹೀಗೆ ಯಾವುದೇ ಬಗೆಯ ವಿನ್ಯಾಸಗಳಿರಲಿ; ಹವಳದ ಹರಳು ಚೆನ್ನಾಗಿಯೇ ಒಪ್ಪುತ್ತದೆ. ಹಾಗಾಗಿ ಸಂಭ್ರಮ ಯಾವುದೇ ಇರಲಿ; ಹವಳವನ್ನು ತೊಟ್ಟು ಹೊಳೆಯಬಹುದು.

ಸಮುದ್ರಾಳದಲ್ಲಿ ದೊರೆಯುವ ಸಿನಿಡೇರಿಯಾ ಕುಟುಂಬಕ್ಕೆ ಸೇರಿದ ಅಕಶೇರುಕ ಜೀವಿಗಳ ಅಸ್ಥಿಪಂಜರವೇ ಹವಳಗಳು. ಈ ಜೀವಿಗಳು ಮೃದುವಾದ ಲೋಳೆಯಂಥ ಸೂಕ್ಷ್ಮಜೀವಿಗಳಾಗಿದ್ದು, ಕ್ಯಾಲ್ಸಿಯಂ ಕಾರ್ಬೋನೇಟ್ ಅನ್ನು ಹೊರಹಾಕುತ್ತವೆ. ತಮ್ಮ ಸುತ್ತಲೂ ಗಟ್ಟಿ ಅಸ್ಥಿಪಂಜರವನ್ನು ನಿರ್ಮಿಸುತ್ತವೆ. ಇಟಾಲಿಯನ್, ಜಪಾನೀಸ್, ಮೆಡಿಟೇರಿಯನ್, ಅಂಡಮಾನ್ ನಿಕೋಬಾರ್‌ನಂಥ ಪ್ರದೇಶಗಳಲ್ಲಿ ಸಿಗುವ ಹವಳಗಳಿಗೆ ಉತ್ತಮ ಬೇಡಿಕೆ ಇದೆ.

ಕೆಂಪು ಹವಳದ ಹೂವಿನ ನೆಕ್ಲೇಸ್, ಹವಳವನ್ನು ಸಣ್ಣ ಸಣ್ಣ ಮುತ್ತುಗಳಿಂದ ಕೂಡಿಸಿ ಮಾಡಿದ ಕಿವಿಯೋಲೆಗಳು, ಕೈ ಉಂಗುರಗಳು, ವಜ್ರದ ಹರಳಿನೊಂದಿಗೆ ಮಾಡಿದ ನೆಕ್ಲೇಸ್‌ಗಳು, ಹವಳದ ಪೆಂಡೆಂಟ್‌ಗಳನ್ನು ಹೆಚ್ಚು ಇಷ್ಟಪಟ್ಟು ಖರೀದಿಸಲಾಗುತ್ತದೆ. ಇನ್ನು ಕರಿಮಣಿ ಸರದಲ್ಲಿ ತಾಳಿಯ ಅಕ್ಕಪಕ್ಕ ಹವಳದ ಮಣಿಗಳನ್ನು ಧರಿಸುವುದು ಕಡ್ಡಾಯವೆಂಬ ಸಂಪ್ರದಾಯ ಕರಾವಳಿಯ ಭಾಗದಲ್ಲಿದೆ.



### ಯಾವ ಬಣ್ಣದ ಬಟ್ಟೆಗೆ ಸೂಕ್ತ?

ಮೊದಲೆಲ್ಲ ಕೆಂಪು ಹವಳದ ಆಭರಣಗಳನ್ನು ಕೆಂಪು ಉಡುಗೆಗೆ ಹೊಂದಿಸಿ ಧರಿಸಲಾಗುತ್ತಿತ್ತು. ಆದರೆ, ಈಗ ಫ್ಯಾಷನ್ ಬದಲಾಗಿದೆ. ಕಾಂಟ್ರಾಸ್ಟ್ ಬಣ್ಣವನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಸಾಮಾನ್ಯವಾಗಿ ನ್ಯೂಟ್ರಲ್ ಟೋನ್‌ಗಳಿರುವ ಬಣ್ಣಗಳನ್ನು ಕೆಂಪು ಹವಳಕ್ಕೆ ಹೊಂದಿಸಲಾಗುತ್ತದೆ.

ಕಪ್ಪು ಸೀರೆಯ ಅಥವಾ ಗೌನ್‌ಗಳಿಗೆ ತೆಳುವಾದ ಹೆಚ್ಚು ಭಾರವಲ್ಲದ ಹವಳದ ಸರಗಳು, ಚೋಕರ್‌ಗಳು ಚೆನ್ನಾಗಿ ಕಾಣುತ್ತದೆ. ಒಂದು ಸಾದಾ ಸೀದಾ ಸೀರೆ ಹಾಗೂ ಸರಳ ಹವಳದ ಆಭರಣವನ್ನು ಪಾರ್ಟಿವೇರ್ ಆಗಿ ಪರಿವರ್ತಿಸಬಹುದು. ಬಿಳಿ ಬಣ್ಣದ ಟಿ–ಶರ್ಟ್ ಅಥವಾ ಜಮ್‌ಸೂಟ್ ಧರಿಸಿ, ಹವಳದ ಚೋಕರ್ ಹಾಕಿಕೊಂಡು ಬಿಟ್ಟರೆ ಪಾರ್ಟಿಗೆ ಆರಾಮವಾಗಿ ಹೋಗಿ ಬರಬಹುದು.

ಕೆಂಪು ಹವಳದ ಆಭರಣಗಳಿಗೆ ಬೂದು ಬಣ್ಣದ ಉಡುಗೆ ಅಥವಾ ಪ್ಯಾಂಟ್‌ಸೂಟ್ ಅತ್ಯಾಧುನಿಕ ಕ್ಯಾನ್ವಾಸ್‌ನಂತೆ ಕಾರ್ಯನಿರ್ವಹಿಸುತ್ತದೆ. ಬೆಳ್ಳಿ ಸರಪಳಿಯ ಮೇಲೆ ಸೂಕ್ಷ್ಮವಾದ ಹವಳದ ಪೆಂಡೆಂಟ್ ಚೆನ್ನಾಗಿ ಒಪ್ಪುತ್ತದೆ. ಕೆಂಪು ಮತ್ತು ನೀಲಿ ನಡುವಿನ ಕಾಂಬಿನೇಷನ್ ಸೊಗಸಾದ ಗಮನ ಸೆಳೆಯುವ ಸಂಯೋಜನೆಯನ್ನು ಸೃಷ್ಟಿಸಬಲ್ಲದು. ನೀಲಿ ಗೌನ್ ತೊಟ್ಟು ಮಿನಿಮಲಿಸ್ಟ್ ಹವಳದ ಸರ ತೊಟ್ಟು ಮಿಂಚಬಹುದು.

ಕಂದು ಅಥವಾ ಬೀಜ್‌ನಂಥ ಮಣ್ಣಿನ ಬಣ್ಣಗಳ ಉಡುಪುಗಳಿಗೂ ಹವಳದ ಸರಗಳು ನೈಸರ್ಗಿಕ ಲುಕ್ ನೀಡುತ್ತದೆ. ಕಂದುಬಣ್ಣವನ್ನು ಹವಳವು ತನ್ನ ಕೆಂಬಣ್ಣದ ಹೊಳಪಿನಲ್ಲಿ ಹೊಳೆಯುವಂತೆ ಮಾಡಿದರೆ ಆಶ್ಚರ್ಯವೇನಿಲ್ಲ!. ■